ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

## ಮಾಸಿಕ ಸುದ್ದಿ ಪತ್ರಿಕೆ

ಸಂಪುಟ–1 ಮಾರ್ಚ್, 2019 ಮಾಸಿಕ ಪತ್ರಿಕೆ ಸಂಚಿಕೆ–6

## ಈರುಳ್ಳಿ ಬೆಳೆಯ ಕ್ಷೇತ್ರೋತ್ಸವ

ದಿನಾಂಕ 01-03-2019 ರಂದು ಶಿರಹಟ್ಟಿ ತಾಲೂಕಿನ ರಣತೂರ ಗ್ರಾಮದಲ್ಲಿ ಹಮ್ಮಿಕೊಂಡ ಬಿಳಿ ಈರುಳ್ಳಿ ಬೆಳೆಯ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ ಅಡಿಯಲ್ಲಿ ಕ್ಷೇತ್ರೋತ್ಸವವನ್ನು ಏರ್ಪಡಿಸಲಾಯಿತು. ಈ ಪ್ರಾತ್ಯಕ್ಷಿಕೆಗಳನ್ನು 5 ಜನ ರೈತರ ಹೊಲದಲ್ಲಿ 5 ಎಕರೆ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕ್ಷೇತ್ರೋತ್ಸವವನ್ನು ಶ್ರೀ ಸಂತೋಷ ಹೆಬ್ಬಾಳ ಇವರ ಹೊಲದಲ್ಲಿ ಏರ್ಪಡಿಸಲಾಗಿತ್ತು. ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ ರೈತರು ಈರುಳ್ಳಿ ಬೆಳೆಯನ್ನು ಗಮನಿಸಿ ತಮ್ಮ ಉತ್ತಮ ಪ್ರತಿಕ್ರಿಯೆಗಳನ್ನು ನೀಡಿದರಲ್ಲದೇ ಸಮಗ್ರ ಬೆಳೆ ನಿರ್ವಹಣೆ ಮಾಡುವುದರಿಂದ ಹೆಚ್ಚು ಇಳುವರಿ ಪಡೆಯಬಹುದೆಂದು ಮನವರಿಕೆ ಮಾಡಿಕೊಂಡರು. ಕೇಂದ್ರದ ವಿಜ್ಞಾನಿಗಳಾದ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ ವಿಭಾಗ) ಇವರು ಬೆಳೆ ಉತ್ಪಾದಕತೆ ಕುರಿತು ತಿಳಿಸಿದರು. ಕೇಂದ್ರದ ಇನ್ನೋರ್ವ ವಿಜ್ಞಾನಿಗಳಾದ ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ) ಇವರು ಈರುಳ್ಳಿ ಬೆಳೆಯಲ್ಲಿ ಬರುವ ಕೀಟ ಮತ್ತು ರೋಗದ ಹತೋಟಿ ಕುರಿತು ತಿಳಿಸಿದರು. ಕಾರ್ಯಕ್ರಮದಲ್ಲಿ 38 ಜನ ರೈತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.





## ತೊಗರಿ ಬೆಳೆಯಲ್ಲಿ ಸ್ಪೈರಲ್ ಸಪರೇಟರ್ ಯಂತ್ರದ ಪ್ರಾತ್ಯಕ್ಷಿಕೆ

ಶಿರಹಟ್ಟಿ ತಾಲೂಕಿನ ರಣತೂರ ಗ್ರಾಮದಲ್ಲಿ ತೊಗರಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕುರಿತು ಏರ್ಪಡಿಸಿದ ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ಸ್ಪೈರಲ್ ಸಪರೇಟರ್ ಯಂತ್ರದ ಪ್ರಾತ್ಯಕ್ಷಿಕೆಯನ್ನು ದಿನಾಂಕ 01-03-2019 ರಂದು ಏರ್ಪಡಿಸಲಾಗಿತ್ತು. ಸ್ಪೈರಲ್ ಸಪರೇಟರ್ ಯಂತ್ರದ ಪ್ರಾತ್ಯಕ್ಷಿಕೆಯನ್ನು ಶ್ರೀ ಬಸನಗೌಡ ಪಾಟೀಲ ಇವರ ಹೊಲದಲ್ಲಿ ಏರ್ಪಡಿಸಲಾಯಿತು. ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ ರೈತರು ಉತ್ತಮ ಪ್ರತಿಕ್ರಿಯೆ ನೀಡಿದರಲ್ಲದೇ ಶ್ರೇಣಿಕರಣ ಮಾಡಿದ ಕಾಳುಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ





ಸಿಗುತ್ತದೆ ಮತ್ತು ಈ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಿದರು. ಇಂತಹ ಹೊಸ ತಂತ್ರಜ್ಞಾನಗಳನ್ನು ಕೃಷಿ ವಿಜ್ಞಾನ ಕೇಂದ್ರದವರು ನೀಡಿ ಕೃಷಿ ಉತ್ಪನ್ನವನ್ನು ಮತ್ತು ಆದಾಯ ಹೆಚ್ಚಿಸಬೇಕೆಂದು ಕೋರಿದರು. ಕೇಂದ್ರದ ವಿಜ್ಞಾನಿಗಳಾದ ಶ್ರೀ ವಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ) ಇವರು ಮಾತನಾಡಿ 'ಧಾನ್ಯಗಳನ್ನು ಶ್ರೇಣಿಕರಣ ಮಾಡಿ ಮಾರಾಟ ಮಾಡುವುದರಿಂದ ಒಂದು ಕ್ವಿಂಟಾಲಗೆ 400 – 800 ರೂಪಾಯಿಯವರೆಗೆ ಹೆಚ್ಚಿಗೆ ಬೆಲೆಯನ್ನು ಪಡೆಯಬಹುದು' ಎಂದು ತಿಳಿಸಿದರು. ಪ್ರತಿಯೊಬ್ಬ ರೈತರು ಧಾನ್ಯಗಳನ್ನು ಶ್ರೇಣೀಕರಣ ಮಾಡಿ ಮಾರಾಟ ಮಾಡಿರಿ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 35 ಜನ ರೈತರು ಭಾಗವಹಿಸಿದ್ದರು.

## ತರಬೇತಿಯಲ್ಲಿ ಕೇಂದ್ರದ ಸಿಬ್ಬಂದಿ ಭಾಗವಹಿಸಿದ ವಿವರ

- 13-16, ಮಾರ್ಚ 2019: ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಏರ್ಪಡಿಸಿದ 'ವಿಸ್ತರಣಾ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಿತ್ತರಿಸುವಲ್ಲಿ ನಿರ್ವಾಹಕರ ಕೌಶಲ್ಯ' ತರಬೇತಿ ಕಾರ್ಯಕ್ರಮದಲ್ಲಿ ಹೇಮಾವತಿ ಹಿರೇಗೌಡರ, ವಿಷಯ ತಜ್ಞರು (ತೋಟಗಾರಿಕೆ) ಇನ್‌ಚಾರ್ಜ ಇವರು ಭಾಗವಹಿಸಿದ್ದರು.

- 25-27, ಮಾರ್ಚ 2019: ಭಾರತೀಯ ಹುಲ್ಲು ಮತ್ತು ಮೇವು ಸಂಶೋಧನಾ ಕೇಂದ್ರ – ಪ್ರಾಂತೀಯ ಸಂಶೋಧನಾ ಸಂಸ್ಥೆ, ಧಾರವಾಡದಲ್ಲಿ ಏರ್ಪಡಿಸಿದ 'ಮೇವಿನ ಬೆಳೆಗಳಲ್ಲಿ ಗುಣಮಟ್ಟದ ಬೀಜ ಉತ್ಪಾದನೆ' ತರಬೇತಿ ಕಾರ್ಯಕ್ರಮದಲ್ಲಿ ಡಾ॥ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ) ಹಾಗೂ ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ ಇವರು ಭಾಗವಹಿಸಿದ್ದರು.

- 27-28, ಮಾರ್ಚ 2019: ಕೃಷಿ ಮಾರುಕಟ್ಟೆ ತರಬೇತಿ ಮಹಾವಿದ್ಯಾಲಯ, ಹುಬ್ಬಳ್ಳಿ ಇವರು ಏರ್ಪಡಿಸಿದ 'ಕೃಷಿ ಮಾರುಕಟ್ಟೆಯಲ್ಲಿ ಗಂಡಾಂತರ ನಿರ್ವಹಣೆ' ಕುರಿತು ತರಬೇತಿಯಲ್ಲಿ ಕೇಂದ್ರದ ಶ್ರೀ ಎಸ್.ಎಚ್.ಆದಾಪೂರ, ವಿಷಯ ತಜ್ಞರು(ಕೃಷಿ ವಿಸ್ತರಣೆ) ಅವರು ಭಾಗವಹಿಸಿದ್ದರು.

## ತರಬೇತಿಗಳು

| ದಿನಾಂಕ | ವಿಷಯ | ತರಬೇತಿಗಳ ಸಂಖ್ಯೆ | ಭಾಗವಹಿಸಿದವರ ಸಂಖ್ಯೆ |
|---|---|---|---|
| 01, 02 & 5 ಮಾರ್ಚ 2019 | ಸಾವಯವ ಕೃಷಿ | 3 | 143 |
| 04&05 ಮಾರ್ಚ 2019 | ಮಣ್ಣಿನ ಫಲವತ್ತತೆ ನಿರ್ವಹಣೆ | 2 | 75 |
| 04 ಮಾರ್ಚ 2019 | ಎರೆಗೊಬ್ಬರ ತಯಾರಿಕೆ | 1 | 20 |
| 26 & 28 ಮಾರ್ಚ 2019 | ಸಿರಿಧಾನ್ಯಗಳ ಪೌಷ್ಠಿಕತೆ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟ | 2 | 78 |
| 23 & 25 ಮಾರ್ಚ 2019 | ತರಕಾರಿ ಬೆಳೆಯಲ್ಲಿ ಸಾವಯವ ಕೃಷಿ | 2 | 110 |
| 29 & 30 ಮಾರ್ಚ 2019 | ಸಿರಿಧಾನ್ಯಗಳ ಪೌಷ್ಠಿಕತೆ, ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರಾಟ | 2 | 82 |

# ಕ್ಷೇತ್ರ ಭೇಟಿ



ಮುಂಚೂಣಿ ಪ್ರಾತ್ಯಕ್ಷಿಕೆ – ಮಾವಿನ ಬೆಳೆ



ಎರೆಹುಳು ಗೊಬ್ಬರ ತಯಾರಿಕೆ ಘಟಕಕ್ಕೆ ಭೇಟಿ – ಶ್ಯಾಗೋಟಿ ಗ್ರಾಮ


ಪ್ರಧಾನ ಸಂಪಾದಕರು:
ಡಾ॥ ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು:
ಡಾ॥ ಸುಧಾ ವಿ. ಮಂಕಣಿ
ವಿಷಯ ತಜ್ಞರು (ಗೃಹ ವಿಜ್ಞಾನ)

ಕಾರ್ಯಕ್ರಮಗಳ ಸಂಯೋಜಕರು:
ಶ್ರೀ ವ್ಹಿ.ಡಿ.ವೈಕುಂಠೆ, ವಿಷಯ ತಜ್ಞರು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಎಚ್. ಆದಾಪೂರ, ವಿಷಯ ತಜ್ಞರು (ಕೃಷಿ ವಿಸ್ತರಣೆ)
ಕುಮಾರಿ ಹೇಮಾವತಿ ಹಿರೇಗೌಡರ, ಪ್ರಭಾರಿ ವಿಷಯ ತಜ್ಞರು (ತೋಟಗಾರಿಕೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ)
ಶ್ರೀ ಎನ್.ಎಚ್.ಭಂಡಿ, ವಿಷಯ ತಜ್ಞರು (ಮಣ್ಣು ವಿಜ್ಞಾನ)
ಡಾ॥ ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ:
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು

ಮುದ್ರಕರು ಹಾಗೂ ಪ್ರಕಾಶಕರು: ಡಾ॥ ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ–582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ–ಅಂಚೆ:kvkhulkoti@gmail.com, ಅಂತರ್‌ಜಾಲ: www.khpkvk.org